ಓಎಸ್ 250/2018 ಪಿ.ಡಬ್ಲ್ಯೂ - 1 ಗುಲಾಮ ಅತ್ತಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16/12/2025 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ವಾಟಿ ಸವಾಲು : ಪ್ರತಿವಾದಿಗಳ ಪರ ಶ್ರೀ ಐ ಡಿ ಎನ್ ವಕೀಲರಿಂದ -**

1. ನಾನು 1 ರಿಂದ 10ನೇ ತರಗತಿ ಉರ್ದು ಮಿಡಿಯಮನಲ್ಲಿ ಓದಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಸದರಿ ದಾವೆಯನ್ನು ಪ್ರತಿವಾದಿಗಳ ವಿರುದ್ಧ ನನ್ನ ಜಾಗದಲ್ಲಿ ಶೌಚಾಲಯದ ನೀರು ಬಡಬಾರದು ಎಂದು ಕೇಳಿ ಈ ದಾವೆ ಮಾಡಿದ್ದೇನೆ . ಸದರಿ ಜಾಗ ನನ್ನದು ಎಂದು ತೋರಿಸಲು ಅದರ ಮಾಲಿಕತ್ವದ ಕುರಿತು ಅದರ ದಾಖಲೆಗಳನ್ನು ಹಾಜರ ಮಾಡಿರುತ್ತೇನೆ. ಸದರಿ ಹಾದಿ ಸಲುವಾಗಿ ಶಂಕರ ಬಾಲಾಜಿ ಪ್ರಭು ನನ್ನ ತಂದೆ ತವಕಲ ಸಯ್ಯದ ಅಬ್ದುಲಹಮೀದ ಅತ್ತಾರ ಇವರಿಗೆ ಬರೆದುಕೊಟ್ಟಂತಹ ಕಾಗದ ಆಗಿದೆ. ಅದು ಯಾವ ಸ್ವರೂಪದ ಕಾಗದ ಎಂದು ನನಗೆ ಹೇಳಲು ಬರುವುದಿಲ್ಲ. ಆ ಕಾಗದ ಆದಾಗ ನಾನು ಸಣ್ಣವನಿದ್ದೆ , ನನಗೆ ಜ್ಞಾನ ಇರಲಿಲ್ಲ. ಸದರಿ ಕಾಗದವನ್ನು ಓದಿ ತಿಳಿದುಕೊಂಡಿರುತ್ತೇನೆ. 1949 ರಲ್ಲಿ ನನ್ನ ತಂದೆ ವಿರುದ್ಧ ಶಂಕರ ಬಾಲಾಜಿ ಪ್ರಭು ಇವರು ದಾವೆ ಮಾಡಿದ್ದರು , ನಂತರ 1950 ರಲ್ಲಿ ರಾಜಿ ಆಗಿ ನನ್ನ ತಂದೆಗೆ ಆ ಜಾಗವನ್ನು ಬಿಟ್ಟುಕೊಟ್ಟರು. ದಾವಾ ಆಸ್ತಿಗೂ ಹಾಗೂ ಅಲ್ಲಿ ರಾಜಿ ಆದಂತಹ ಜಾಗಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ , ಎರಡೂ ಒಂದೇ ಜಾಗ ಎಂದು ಹೇಳುತ್ತಾರೆ. ಶಂಕರ ಬಾಲಾಜಿ ಪ್ರಭು ಇವರು ಅಪಸಾತಿ ಪ್ರಕಾ ನಮಗೆ ಆ ಕಾಗದವನ್ನು ನೊಂದಣಿ ಮಾಡಿ ಕೊಟ್ಟಿದ್ದಾರೆ .

2. ನಾವು ವಿಪಿಸಿ ನಂ. 1164 ನ್ನು 2008 ರಲ್ಲಿ ಶಂಕರ ಬಾಲಾಜಿ ಪ್ರಭು ಇವರ ಮಕ್ಕಳ ಕಡೆಯಿಂದ ಖರೀದಿ ಮಾಡಿದ್ದೇವೆ . ಆ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ಆ ಖರೀದಿ ಪತ್ರದಲ್ಲಿ ಪ್ರಭು ಈ ರೀತಿ ಅಪಸಾತಿನಲ್ಲಿ ನಮಗೆ ಜಾಗ ಬಿಟ್ಟು ಕೊಟ್ಟಿದ್ದಾನೆ ಎಂದು ಬರೆದಿದೆ. ಅಪಸಾತ ಆದ ಪ್ರಕಾರ ಸಂದಿ ಜಾಗವನ್ನು ಶಂಕರ ಬಾಲಾಜಿ ಪ್ರಭು ನಮಗೆ ಬಿಟ್ಟು ಕೊಟ್ಟಿದ್ದರು, ನಂತರ ನಾವು ಅವರ ಮಕ್ಕಳ ಕಡೆಯಿಂದ ಅದರ ಪಕ್ಕದಲ್ಲಿರುವ ಮತ್ತೊಂದು ಜಾಗವನ್ನು ಖರೀದಿ ಮಾಡಿದ್ದೇವೆ. ಆ ಸಂದಿ ಜಾಗದ ನಂಬರ ವಿಪಿಸಿ 1164 ಇರುತ್ತದೆ. ನಾವು ಖರೀದಿ ಮಾಡಿದ್ದು ವಿಪಿಸಿ 1164 ರ ಜಾಗ ಮಾತ್ರ.

**(ಪ್ರತಿವಾದಿ ಪರ ವಕೀಲರು ಮುಂದುವರೆದ ವಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

(ಆದಿತ್ಯ ಆರ್. ಕಲಾಲ್)

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**